ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ದಿವಸಗಳಹಿಂದೆ. Communicate ಮಾಡುವುದರಲ್ಲಿ ತಡವಾಗಿದೆಯೆಂದು ಹೇಳಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ 20 ದಿವಸಗಳಲ್ಲಿ ನಡೆದಿರುವ ವ್ಯವಹಾರಗಳಿಗೆ ಯಾರು ಜವಾಬ್ದಾರರು?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ provision ಇದೆ. Company's Act ನ 19ನೆಯ ಸಬ್‌ಕ್ಲಾಸ್ ಪ್ರಕಾರ ಕೆಲಸ ನಡೆದಿದೆ; ತೊಂದರೆಯಾಗಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ delay ಆಗಿರುವುದಕ್ಕೆ ಕಾರಣರು ಮೊಬ್ಬೇನರರೇ, ಥವಾ ಕೆಳಗಿನ ಅಧಿಕಾರಿಗಳೇ ಅಥವಾ ಕೆಳಗಿನ ನೌಕರರೇ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲರೂ ಸೇರಿದ್ದಾರೆ; It is a co-ordinated whole. That delay is not unpardonable.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಪ್ಪು ಯಾರದೆಂದು ಹೇಳುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನರ್ಕಾರದ್ದೆಂತಲೇ ಹೇಳೋಣ.

ಶ್ರೀ ಎಸ್. ಎಚ್. ತಮ್ಮಯ್ಯ ಉ॥ ಹನುಮಂತೇಗೌಡರ ತಮ್ಮಯ್ಯ.—ಈ ಕಂಪೆನಿಯು ಕೆಲಸ ಬಹಳ ಆಶಾದಾಯಕವಾಗಿದೆಯೆಂದಲ್ಲವೆ, ಈ ಚೇರ್ಮನ್ನರನ್ನು ಹೆಚ್ಚುಕಾಲ ಇಟ್ಟುಕೊಳ್ಳಬೇಕೆಂದು ಮಾಡಿದ್ದು?

(ಉತ್ತರವಿಲ್ಲ)

---

## Government Industries to manufacture finished products (Establishment Districts).

*Q.*—525. Sri K. V. BYRE GOWDA (Bangalore North).—

Will the Government be pleased to state:—

whether they have contemplated to establish such industries as would manufacture finished products from the raw materials available in such places of the districts?

*A.*—Sri H. SIDDAVEERAPPA (Minister for Home and Industries).—

Government do not at present contemplate setting up industries of their own in all the important places of the District. Their policy, however, is decentralisation of industries and to encourage establishment of such industries in the private sector wherever facilities such as raw materials, water supply, electric power, skilled labour, transport, etc., are available.

ಶ್ರೀ ಕೆ. ವಿ. ಬೈರೇಗೌಡ.—ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಿ ಆಯಾ ಡಿಸ್ಟ್ರಿಕ್ಟ್‌ಗಳಲ್ಲೇ ಸಾಧ್ಯವಾದಷ್ಟುಮಟ್ಟಿಗೆ ಏರ್ಪಡಿಸುವುದಾಗಿ ಹೇಳಿದ್ದೀರಿ. ಈಗ ಬೆಂಗಳೂರಿನ ಸುತ್ತಮುತ್ತಲೂ ಮಾಡಿರುವ ರೀತಿಯಲ್ಲಿ ಬೇರೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೂ ಯಾವುದಾದರೂ ಕೈಗಾರಿಕೆಗಳನ್ನು ಏರ್ಪಡಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಮೈಸೂರು, ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು ಮುಂತಾಗಿ ಎಲ್ಲಾ ಕಡೆಯಲ್ಲೂ ಒಂದೊಂದು ಕೈಗಾರಿಕೆ ಏರ್ಪಾಡಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ವ್ಯವಸಾಯದ ಪದಾರ್ಥಗಳಾದ ಆಲೂಗಡ್ಡೆ ಮುಂತಾದುವುಗಳನ್ನು canning ಮಾಡಿಸುವುದಕ್ಕೇನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಸ್ಥಿತಿ ಅನುಕೂಲವಾಗಿದ್ದು, raw materials ಸಾಕಾದಷ್ಟು ಸಿಕ್ಕಿ natural facilities ಇದ್ದರೆ ಬೆಂಗಳೂರಿನಲ್ಲೆ ಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಆಲೂಗೆಡ್ಡೆಯು ಹೆಚ್ಚಾಗಿ ಬೆಂಗಳೂರು, ಹಾಸನ, ಕೋಲಾರ—ಈ ಭಾಗಗಳಲ್ಲಿ ಬೆಳೆಯುವುದರಿಂದ, ಅದನ್ನು ಶೇಖರಿಸಿಡುವುದಕ್ಕಾಗಿ ಒಂದು cooling plant ನ್ನು ಏರ್ಪಡಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ suggestion ಬಂದರೆ ಮಾಡುತ್ತೇವೆ.

---

## Silk Industrialists (Deputation).

*Q.*—507. Sri N. HUCHMASTHY GOWDA (Huliyurdurga).—

Will the Government be pleased to state:—

(*a*) when they intend sending some people interested in Silk Industry to places where silk is grown in India to acquire better knowledge in the field, as per recommendations of the Mysore Silk Advisory Board;

(*b*) the places to which they intend to send them;

(*c*) the conditions that would be imposed while sending them to such places?

*A.*—Sri H. SIDDAVEERAPPA (Minister for Home and Industries).—

(*a*) The subject is under consideration of Government.

(*b*) and (*c*) *Vide* answer to (*a*).

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮೈಸೂರು ಸಿಲ್ಕ್ ಅಡ್ವೈಸರಿ ಬೋರ್ಡಿನವರು ತೀರ್ಮಾನಮಾಡಿ ಎಷ್ಟು ದಿವಸ ಆಯಿತು?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವಾರು ತಿಂಗಳುಗಳಾದವು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರೇಷ್ಮೆಯ ಉತ್ಪತ್ತಿ ಬರ್ಚನ್ನು ಕಡಮೆ ಮಾಡುವುದು ಅತ್ಯಾವಶ್ಯಕವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು,